**ದಿನಾಂಕ: 10-01-2013 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | **ಕೌನ್ಸಿಲ್ ಕಾರ್ಯದರ್ಶಿ** |
| 2 | ಶ್ರೀ.ಎನ್.ಚಂದ್ರಶೇಖರ್‌ರಾಜು | ಸದಸ್ಯರು | 2 | **ಕಾ.ಪಾ.ಅ.(ಯೋಜನೆ – (ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ / ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 3 | ಶ್ರೀಮತಿ.ಶಕುಂತಲ.ಎನ್ | ಸದಸ್ಯರು | | |
| 4 | ಶ್ರೀಮತಿ.ನಂದಿನಿ.ಕೆ | ಸದಸ್ಯರು | | |
| 5 | ಶ್ರೀ.ತಿಮ್ಮರಾಜು | ಸದಸ್ಯರು | 3 | **ಸ.ಕಾ.ನಿ.ಅ.(ಯೋಜನೆ – (ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ / ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 6 | ಶ್ರೀ.ಎಸ್.ಗಂಗಾಧರ್ | ಸದಸ್ಯರು | | |
| 7 | ಶ್ರೀ.ಎಮ್.ಶಿವರಾಜು | ಸದಸ್ಯರು | | |
| 8 | ಶ್ರೀ.ಎಂ.ಸಿ.ಶ್ರೀನಿವಾಸ್ | ಸದಸ್ಯರು | 4 | **ತೋಟಗಾರಿಕೆ ಅಧೀಕ್ಷಕರು – (ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 9 | ಶ್ರೀಮತಿ.ಸರಳ | ಸದಸ್ಯರು | | |
| 10 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | | |
| 11 | ಶ್ರೀಮತಿ.ಲಕ್ಷ್ಮಿ | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

*ಪಾಲಿಕೆಯ 198 ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳಿಗೆ 2012-13ನೇ ಸಾಲಿನ ಕಾರ್ಯಕ್ರಮ ಪಟ್ಟಿ(POW)ಯನ್ನು ತಯಾರಿಸಿ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವಂತೆ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.*

**ಅಧ್ಯಕ್ಷರು,** ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

## 1. ವಿಷಯ ಸಂಖ್ಯೆ:ತೋ/ಸ್ಥಾ/ಸ/28/12-13, ದಿನಾಂಕ:26-11-2012

ಮೆ॥ಸ್ಪರ್ಶ್ ಆರ್ಥೋಪೆಡಿಕ್ ಆಸ್ಪತ್ರೆಯವರು ಪಾಲಿಕೆ ವ್ಯಾಪ್ತಿಯಲ್ಲಿನ ಸರ್ಕಲ್ಸ್ ಮತ್ತು ಮೀಡಿಯನ್ಸ್ ಸ್ಥಳಗಳಲ್ಲಿ ಸ್ವಂತ ವೆಚ್ಚದಲ್ಲಿ ಭೂ ವಿನ್ಯಾಸ ಮತ್ತು ಅಭಿವೃದ್ಧಿಪಡಿಸಲು **ಈ ಕೆಳಕಂಡ ಸ್ಥಳಗಳನ್ನು ಐದು ವರ್ಷದ ಅವಧಿಗೆ ಹಂಚಿಕೆ** ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ.

1) ಬ್ರಿಗೇಡ್ ಡಯಾಗನಲ್ ರಸ್ತೆ ವೃತ್ತ, 2) ಚಾಲುಕ್ಯ ಹೋಟೆಲ್ ಮುಂಭಾಗ ವೃತ್ತ, 3) ರೇಸ್ ಕೋರ್ಸ್ ರಸ್ತೆ, ಜನತಾದಳ ಕಛೇರಿ ಮುಂಭಾಗ ವೃತ್ತ, 4) ಅಮ್ಮಣ್ಣಿ ಕಾಲೇಜ್ ಎದುರು ಮಲ್ಲೇಶ್ವರಂ ವೃತ್ತ, 5) ಮರಿಯಮ್ಮ ದೇವಸ್ಥಾನ ಎದುರು, ಶಿವಾಜಿನಗರ ವೃತ್ತ, 6) ಮೇಖ್ರಿ ಸರ್ಕಲ್ ಅಂಡರ್ ಪಾಸ್ ವೃತ್ತ

ಮುಂದುವರೆದಿದೆ. . . . .

ಈ ಸಂಬಂಧ ಮೆ॥ಸ್ಪರ್ಶ್ ಆರ್ಥೋಪೆಡಿಕ್ ಆಸ್ಪತ್ರೆಯವರಿಗೆ ಮೇಲ್ಕಂಡ ಸ್ಥಳಗಳಲ್ಲಿ ಯಾವುದೇ ರೀತಿಯ ವಾಣಿಜ್ಯ ಜಾಹೀರಾತು ಫಲಕಗಳನ್ನು ಅಳವಡಿಸಲು ಅವಕಾಶ ನೀಡದೇ ಹಾಗೂ ಸದರಿ ಸ್ಥಳಗಳಲ್ಲಿ ಪಾಲಿಕೆಯ ಮತ್ತು ಮೆ॥ಸ್ಪರ್ಶ್ ಆರ್ಥೋಪೆಡಿಕ್ ಆಸ್ಪತ್ರೆಯ ಹೆಸರನ್ನು ಒಳಗೊಂಡ ನಾಮಫಲಕಗಳನ್ನು ಅಳವಡಿಸಿ ತಮ್ಮ ಸ್ವಂತ ವೆಚ್ಚದಲ್ಲಿ ಭೂ ವಿನ್ಯಾಸ ಮತ್ತು ಅಭಿವೃದ್ಧಿಪಡಿಸಲು ಐದು ವರ್ಷದ ಅವಧಿಗೆ ಅನುಮತಿ ನೀಡುವ ಸಂಬಂಧ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:13–11–2012 ರ ಟಿಪ್ಪಣಿ.

**ನಿರ್ಣಯ :– ಸ್ಥಳ ಪರಿಶೀಲನೆಗಾಗಿ ಮುಂದೂಡಲಾಗಿದೆ.**

## 2. ವಿಷಯ ಸಂಖ್ಯೆ:ತೋ/ಸ್ಥಾ/ಸ/31/12–13, ದಿನಾಂಕ:17–12–2012

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟ ಕೆಲವು ಉದ್ಯಾನವನಗಳು ಬಹಳ ವರ್ಷಗಳ ಹಿಂದೆ ನಿರ್ಮಾಣ ಮಾಡಲಾಗಿದ್ದು, ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ. ದಿನಾಂಕ:16–07–2012 ರಂದು ಪದ್ಮನಾಭನಗರ ಕ್ಷೇತ್ರದ ಮಾನ್ಯ ಶಾಸಕರು, ಗೃಹ ಹಾಗೂ ಸಾರಿಗೆ ಸಚಿವರು ಹಾಗೂ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮಾನ್ಯ ಆಯುಕ್ತರೊಡನೆ ನಡೆದ ಸಭೆಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ತುರ್ತಾಗಿ ಕೈಗೊಂಡು ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು 2012–13ನೇ ಸಾಲಿನ ಆಯವ್ಯಯದ ಮಂಜೂರಾತಿಯನ್ನು ನಿರೀಕ್ಷಿಸಿ, ಸದರಿ ಆಯವ್ಯಯದ ಪುಟ ಸಂಖ್ಯೆ.65 ರಲ್ಲಿ ಪಿ–0311 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಲಭ್ಯವಿರುವ ರೂ.5.00 ಕೋಟಿ ಅನುದಾನದಲ್ಲಿ ಭರಿಸಿ ಟೆಂಡರ್ ಕರೆದು ಕಾಮಗಾರಿಗಳನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲು ಸೂಚಿಸಿರುತ್ತಾರೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | Providing Granite Benches, Bench platform, Eurocon Tiles and Removing and resetting cobble stone pathway and there development works in Laxman Rao Boulevard ‘E’ park in Ward No.166 | 5.00 |
| 2. | Providing Granite Benches, Bench platform, Eurocon Tiles and Removing and resetting cobble stone pathway and there development works in Laxman Rao Boulevard ‘D’ park in Ward No.166 | 5.00 |
| 3. | Providing Granite Benches, Bench platform, Eurocon Tiles and Removing and resetting cobble stone pathway fencing to the vacant site on south side of the park at Nandanavana park in ward No.161. | 15.00 |
| 4. | Providing Granite Benches, Bench platform, Eurocon Tiles at Lavakusha park in Ward No.181 | 5.60 |
| 5. | Providing Granite Benches, Bench platform, Eurocon Tiles and Removing and resetting cobble stone pathway and there development works in Laxman Rao Boulevard ‘F’ park in Ward No.166 | 5.60 |

ಮುಂದುವರೆದಿದೆ. . . . .

| | | |
|---|---|---|
| 6. | Providing Granite Benches, Bench platform, Eurocon Tiles and Removing and resetting cobble stone pathway and there development works in Bhuvaneshwari Nagara park in Ward No.166 | 15.00 |
| 7. | Providing Granite Benches, removing and resetting cobble stone pathway Senior Citizen shelter and other development Work at Dr.Rajkumar park in Ward No.180 | 13.20 |
| 8. | Development of Park (CA site No.4) at 4th Main road, 4th cross in Ward No.161. | 19.90 |
| 9. | Providing Granite Benches, Bench platform, Eurocon Tiles at Pushpanjali park in Ward No.181. | 5.60 |
| | **ಒಟ್ಟು ಮೊತ್ತ ರೂ.** | **89.90** |

ಅದರಂತೆ, ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ 2012–13ನೇ ಸಾಲಿನ ಆಯವ್ಯಯದ ಮಂಜೂರಾತಿಯನ್ನು ನಿರೀಕ್ಷಿಸಿ, ಸದರಿ ಆಯವ್ಯಯದ ಪುಟ ಸಂಖ್ಯೆ.5ರಲ್ಲಿ ಪಿ–0311 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಲಭ್ಯವಿರುವ ರೂ.5.00 ಕೋಟಿ ಅನುದಾನದಲ್ಲಿ ಈ ಮೇಲ್ಕಂಡ 09 ಕಾಮಗಾರಿಗಳ ಒಟ್ಟು ಮೊತ್ತ ರೂ.89.90 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಜಾಬ್ ಸಂಕೇತ ನೀಡಲು ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:24–11–2012 ರ ಟಿಪ್ಪಣಿ.

<u>ನಿರ್ಣಯ:-</u> **ಮಾನ್ಯ ಆಯುಕ್ತರವರ ದಿನಾಂಕ:24–11–2012 ರ ಟಿಪ್ಪಣಿಯಲ್ಲಿರುವ, ಈ ಕಾಮಗಾರಿಗಳನ್ನು ಸಮಿತಿಯು ದಿನಾಂಕ:04–10–12ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ದಕ್ಷಿಣ ವಲಯಕ್ಕೆ ಹಂಚಿಕೆ ಮಾಡಿರುವ ರೂ.250.00 ಲಕ್ಷಗಳಲ್ಲಿ ಸದರಿ ಕಾಮಗಾರಿಗಳನ್ನು 2012–13ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಿಕೊಂಡು ಸಮಿತಿ ಅನುಮತಿ ಪಡೆದು ಕಾಮಗಾರಿಯನ್ನು ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

## 3. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/32/12–13, ದಿನಾಂಕ:18–12–2012</u>

ಬಿ.ಬಿ.ಎಂ.ಪಿ. ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ, ಈ ಕೆಳಕಂಡ ಕಾಮಗಾರಿಗಳು ಸಾರ್ವಜನಿಕರ ಹಿತದೃಷ್ಠಿಯಿಂದ ಅತಿ ಅವಶ್ಯಕವಾಗಿದ್ದು, ಅವುಗಳನ್ನು ತುರ್ತಾಗಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರಿಂದ ಅನುಷ್ಠಾನಗೊಳಿಸಲು ಸೂಕ್ತಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟವರಿಗೆ ಆದೇಶಿಸಲು ಮಾನ್ಯ ಶ್ರೀ.ಎಂ.ಕೆ.ಗುಣಶೇಖರ್, ವಿರೋಧ ಪಕ್ಷದ ನಾಯಕರು ಹಾಗೂ ವಾರ್ಡ್ ಸಂಖ್ಯೆ.63ರ ಸದಸ್ಯರು ತಮ್ಮ ಪತ್ರದ ಸಂಖ್ಯೆ.ಬಿಬಿಎಂಪಿ/ವಿ.ಪ.ನಾ/192/2012–13, ದಿನಾಂಕ:05–12–2012ರಲ್ಲಿ ಮಾನ್ಯ ಆಯುಕ್ತರಲ್ಲಿ ಕೋರಿರುತ್ತಾರೆ.

| ಕ್ರ. ಸಂ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| 1. | ವಾರ್ಡ್ ಸಂಖ್ಯೆ. 63, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ರೈಲು ಸೇತುವೆ ಬಳಿ ಖಾಲಿ ಜಾಗವನ್ನು ಸುಂದರವಾಗಿ ಅಳವಡಿಸಿ | 12.00 |

ಮುಂದುವರೆದಿದೆ. . . . .

| | | |
|---|---|---|
| | ಅಭಿವೃದ್ಧಿಪಡಿಸುವುದು. | |
| 2. | ವಾರ್ಡ್ ಸಂಖ್ಯೆ. 63, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಖಾಲಿ ಜಾಗದಲ್ಲಿ ನಡುದಾರಿ(ಪಾತ್‌ವೇ) ಬೆಂಚುಗಳು, ಡೆಸ್ಟ್‌ಬಿನ್‌ಗಳನ್ನು ಅಳವಡಿಸುವುದು. | 10.00 |
| 3. | ವಾರ್ಡ್ ಸಂಖ್ಯೆ. 63, ಶಿವಾಜಿ ಸರ್ಕಲ್‌ನ ಕಾರಂಜಿ ಹಾಗೂ ಗ್ರಿಲ್‌ಗಳನ್ನು ಅಭಿವೃದ್ಧಿಪಡಿಸುವುದು. | 2.50 |
| 4. | ವಾರ್ಡ್ ಸಂಖ್ಯೆ. 63, ಬೈಯಪ್ಪಗಾರ್ಡನ್ ಶಾಲೆಯ ಆವರಣವನ್ನು ಉದ್ಯಾನವನವನ್ನಾಗಿ ಅಭಿವೃದ್ಧಿಪಡಿಸುವುದು | 12.50 |
| 5. | ಚಾಚಾ ನೆಹರು ಉದ್ಯಾನವನದಲ್ಲಿ ಮಕ್ಕಳ ಆಟದ ಸಾಮಾನುಗಳನ್ನು ಅಳವಡಿಸುವುದು | 5.00 |
| 6. | ಜಯಮಹಲ್ ಉದ್ಯಾನವನದಲ್ಲಿರುವ ಮ್ಯೂಸಿಕಲ್ ಫೌಂಟೇನ್ ದುರಸ್ಥಿ ಮತ್ತು ಕೇಬಲ್ ಹಾಕುವುದು. | 8.00 |
| 7. | ವಾರ್ಡ್ ಸಂಖ್ಯೆ. 63 ರ ವ್ಯಾಪ್ತಿಯಲ್ಲಿರುವ ಉದ್ಯಾನವನಗಳಲ್ಲಿ ಗಿಡಗಳನ್ನು ನೆಡುವುದು. | 15.00 |
| | ಒಟ್ಟು ರೂ. | **65.00** |

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗಳಿಗೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:18–12–2012 ರ ಟಿಪ್ಪಣಿ.

1. ಸದರಿ ಕಾಮಗಾರಿಗೆ ಪಿ–ಕೋಡ್ 2834 ಅಡಿಯಲ್ಲಿ ಜಾಬ್ ಸಂಖ್ಯೆ ನೀಡಲು.
2. ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಂದ ತೆಗೆದುಕೊಳ್ಳಲು ಅನುಮೋದನೆ ಕೋರಿ.

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:18–12–2012 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**4. ವಿಷಯ ಸಂಖ್ಯೆ:ತೋ/ಸ್ಥಾ/ಸ/33/12–13, ದಿನಾಂಕ:19–12–2012**

ಬಿ.ಟಿ.ಎಂ.ಲೇ ಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ.146 ರ ವ್ಯಾಪ್ತಿಯಲ್ಲಿ Providing ornamental granite pole portion to BBMP property in between Lakkasandra in Ward No.146 ರ ಕಾಮಗಾರಿಯನ್ನು 2011–12ನೇ ಸಾಲಿನ P0311 Landscape development of Parks / Medians / Boulevants and Circles (Janoodya works) ರ ಅನುದಾನದಡಿಯಲ್ಲಿ ಮೀಸಲಿಟ್ಟಿರುವ ರೂ.70.00 ಲಕ್ಷಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಹಾಗೂ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆ ನೀಡಲು ಕೋರಿ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ರವರು ಅನುಮೋದನೆ ನೀಡಲು ಕೋರಿರುತ್ತಾರೆ.

ಮುಂದುವರೆದಿದೆ. . . . .

| ಕ್ರಮ ಸಂಖ್ಯೆ | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) |
|---|---|---|
| 1. | Providing ornamental granite pole portion to BBMP property in between Lakkasandra in Ward No.146 | 70.00 |
| | ಒಟ್ಟು | **70.00** |

ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ವಿಭಾಗರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲು ಅನುಮೋದನೆ ನೀಡಲು ಕೋರಿರುವ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಪ್ರಧಾನ ಅಭಿಯಂತರವರ ದಿನಾಂಕ:12–12–2012 ರ ಟಿಪ್ಪಣಿ.

**<u>ನಿರ್ಣಯ:–</u> ಪ್ರಧಾನ ಅಭಿಯಂತರವರ ದಿನಾಂಕ:12–12–2012 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**5. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/34/12–13, ದಿನಾಂಕ:27–12–2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ಯಲಹಂಕ ವಲಯದ, ಯಲಹಂಕ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ಮುಖ್ಯ ಅಭಿಯಂತರರು(ಕೆರೆಗಳು)ರವರ ಕಛೇರಿಯ ವತಿಯಿಂದ ಕೈಗೆತ್ತಿಕೊಂಡು ನಿರ್ವಹಿಸಲಾಗುತ್ತಿದೆ. ಸದರಿ ಕೆರೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಮೆ॥ ಸ್ಟೆಮ್ ಕನ್ಸಲ್ಟೆಂಟ್ಸ್‌ರವರು ವಿವರವಾಗಿ ತಯಾರಿಸಿದ ಯೋಜನಾ ವರದಿಯ (DPR) ಅನುಸಾರವಾಗಿ ಹಂತ–1 ಅಭಿವೃದ್ಧಿ ಕಾಮಗಾರಿಯನ್ನು ರೂ.59.99 ಲಕ್ಷಗಳು ಹಾಗೂ ಹಂತ–2ರ ಅಭಿವೃದ್ಧಿ ಕಾಮಗಾರಿಯನ್ನು ರೂ.1615.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಂಡು ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದ್ದು ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

ಮುಂದುವರೆದಂತೆ, ಉಳಿಕೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಈಗಾಗಲೇ ತಯಾರಿಸಲಾಗಿರುವ ವಿವರವಾದ ಯೋಜನಾ ವರದಿಯ ಅನುಸಾರವಾಗಿ ಯಲಹಂಕ ಕೆರೆಯ ಹಂತ–3ರ ಅಭಿವೃದ್ಧಿ ಕಾಮಗಾರಿಯ ರೂ.495.00 ಲಕ್ಷಗಳ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ 2012–13ನೇ ಸಾಲಿನ ದರಪಟ್ಟಿಯ ಹಾಗೂ ಸಣ್ಣ ನೀರಾವರಿ ಇಲಾಖೆಯ 2010–11ನೇ ಸಾಲಿನ ದರಪಟ್ಟಿಯ ಅನ್ವಯ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿದ್ದು, ಸದರಿ ಕಾಮಗಾರಿಯ ಅಡಿಯಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವನೆಯಿರುತ್ತದೆ.

1. ವಾಕ್‌ವೇ ಅಭಿವೃದ್ಧಿ
2. ಒಳಹರಿವು ಕಾಲುವೆ

ಮುಂದುವರೆದಿದೆ. . . . .

3. ಹೊರಹರಿವು ಕಾಲುವೆಗಳ ಅಭಿವೃದ್ಧಿ
4. ಕಾವಲುಗಾರರ ಕೊಠಡಿ
5. ಮಕ್ಕಳ ಆಟದ ಮೈದಾನ
6. ಸಿಲ್ಟ್ ಟ್ರಾಪ್
7. ಕ್ಯಾಚ್ ಡ್ರೈನ್ ನಿರ್ಮಾಣ ಮತ್ತಿತರೇ ಕಾಮಗಾರಿಗಳು

ಪಾಲಿಕೆಯ 2012–13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ–2099 ರ ಅಡಿಯಲ್ಲಿ ಯಲಹಂಕ ಕೆರೆಯ ಅಭಿವೃದ್ಧಿಗಾಗಿ ರೂ.200.00 ಲಕ್ಷಗಳ ಸಾಂಕೇತಿಕ ಅನುದಾನವು ಲಭ್ಯವಿದ್ದು, ಪ್ರಸಕ್ತ ಸಾಲಿನಲ್ಲಿ ಸದರಿ ಅನುದಾನಕ್ಕೆ ಮಾತ್ರ ವೆಚ್ಚ ಭರಿಸಲಾಗುವುದು. ಇನ್ನುಳಿದ ರೂ.295.00 ಲಕ್ಷಗಳ ಮೊತ್ತವನ್ನು ಪಾಲಿಕೆಯ 2013–14ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು. ಈ ಹಿನ್ನಲೆಯಲ್ಲಿ ಯಲಹಂಕ ಕೆರೆಯ ಹಂತ–3ರ ಸಮಗ್ರ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ರೂ.495.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಕರೆಯಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:25–12–2012 ರ ಟಿಪ್ಪಣಿ.

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:25–12–2012 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

6. ವಿಷಯ ಸಂಖ್ಯೆ:ತೋ/ಸ್ಥಾ/ಸ/35/12–13, ದಿನಾಂಕ:03–01–2013

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಅಪರ ಆಯುಕ್ತರು(ಪೂರ್ವ) ವಲಯ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರು(ಯೋಜನೆ–ಪೂರ್ವ)ರವರು ವಾರ್ಡ್ ನಂ.22ರ ಯಶವಂತಪುರ ಸೇಲಂ ರೈಲ್ವೆ ಲೇನ್ ಪಕ್ಕದ ಪೂರ್ವದ ಕಡೆ ಇರುವ ಆಟದ ಮೈದಾನ ಮತ್ತು ಪಾರ್ಕ್ ಜಾಗಕ್ಕೆ ಚೈನ್ ಲಿಂಕ್ ಪೆನ್ಸಿಂಗ್ ಹಾಕುವ ಈ ಕೆಳಕಂಡ ಎಂಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಪರ ಆಯುಕ್ತರು(ಪೂರ್ವ)ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| Sl. No. | Name of Work | Estimate Cost (Rs.in Lakshs) |
|---|---|---|
| 1. | Providing Security Grill near Yashwanthpur Salem Railway on Eastern side Formation of park and playground From Ch:0.00 to 110.00 | **1996500-00** |
| 2. | Providing Security Grill near Yashwanthpur Salem Railway on Eastern side Formation of park and playground From Ch: 110.00 to 220.00 | **1996000-00** |
| 3. | Providing Security Grill near Yashwanthpur Salem Railway on | **1997500-00** |

ಮುಂದುವರೆದಿದೆ. . . . .

| | | |
|---|---|---|
| | Eastern side Formation of park and playground From Ch:220.00 to 330.00 | |
| 4. | Providing Security Grill near Yashwanthpur Salem Railway on Eastern side Formation of park and playground From Ch:330.00 to 440.00 | **1998000-00** |
| 5. | Providing Security Grill near Yashwanthpur Salem Railway on Eastern side Formation of park and playground From Ch:440.00 to 550.00 | **1994500-00** |
| 6. | Providing Security Grill near Yashwanthpur Salem Railway on Eastern side Formation of park and playground From Ch:550.00 to 660.00 | **1995500-00** |
| 7. | Providing Security Grill near Yashwanthpur Salem Railway on Southern side Formation of park and playground. | **1995000-00** |
| 8. | Providing Security Grill near Yashwanthpur Salem Railway on Formation of park and playground. | **1027000-00** |
| | Total | **1,50,00,000-00** |

2012–13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0607 (ಪಾಲಿಕೆ ಆಸ್ತಿಗಳಿಗೆ ಬೇಲಿ ನಿರ್ಮಾಣ) ಅಡಿಯಲ್ಲಿ ಚಾಲ್ತಿ ಕಾಮಗಾರಿಗಳಿಗೆ ರೂ.500.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದೆ. ಸದರಿ ಎಂಟು ಕಾಮಗಾರಿಗಳನ್ನು ತೋಟಗಾರಿಕೆ ಇಲಾಖೆಯ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಲೆಕ್ಕಶೀರ್ಷಿಕೆ ಪಿ–0607 ಅಡಿಯಲ್ಲಿ ಲಭ್ಯವಿರುವ ರೂ.500.00 ಲಕ್ಷಗಳಲ್ಲಿ ಮೇಲಿನ ಎಂಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅವಶ್ಯವಿರುವ ರೂ.150.00 ಲಕ್ಷಗಳ ಅಂದಾಜು ಪಟ್ಟಿಯ ಮೊತ್ತಕ್ಕೆ ಜಾಬ್ ಸಂಖ್ಯೆ ನೀಡುವ ಸಲುವಾಗಿ ನಿರ್ಣಯ ಕೈಗೊಳ್ಳಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 31–12–2012 ರ ಟಿಪ್ಪಣಿ.

<u>ನಿರ್ಣಯ:–</u> **ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:31–12–2012 ರ ಟಿಪ್ಪಣಿಯನ್ನು ಸಮಿತಿಯು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

## 7. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/36/12–13, ದಿನಾಂಕ:08–01–2013</u>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್ ನಂ.42ರ ವ್ಯಾಪ್ತಿಯ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:04–10–2012ರ ನಿರ್ಣಯದಂತೆ, 2012–13ನೇ ಸಾಲಿನ ಆಯವ್ಯಯದಲ್ಲಿ ಉಳಿಕೆ ರೂ.1200.00 ಲಕ್ಷಗಳನ್ನು ತೋಟಗಾರಿಕೆ ಸ್ಥಾಯಿ ಸಮಿತಿ ಸದಸ್ಯರುಗಳ ವಾರ್ಡ್‌ಗಳಲ್ಲಿ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ಅನುದಾನ ಕಾಯ್ದಿರಿಸಿ ಕಾಮಗಾರಿ ಕೈಗೊಳ್ಳುವಂತೆ ನಿರ್ಣಯ ಕೈಗೊಂಡಿರುತ್ತಾರೆ.

ಮುಂದುವರೆದಿದೆ. . . . .

ಅದರಂತೆ, ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ, ವಾರ್ಡ್ ಸಂಖ್ಯೆ.42ರ ಲಕ್ಷ್ಮೀದೇವಿನಗರ ವ್ಯಾಪ್ತಿಯ (ಜೈಭುವನೇಶ್ವರಿನಗರ) ಉದ್ಯಾನವನಕ್ಕೆ ತಂತಿಬೇಲಿ, ನಡೆದಾರಿ ನಿರ್ಮಾಣ ಕಾಮಗಾರಿಗೆ 2012-13ನೇ ಸಾಲಿನ ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ಅಭಿವೃದ್ಧಿ ಅಡಿಯಲ್ಲಿ ಬರುವ ***"ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆ ಪಿ.ಓ-088"*** ಲೆಕ್ಕಶೀರ್ಷಿಕೆಯಲ್ಲಿ ಕಾಮಗಾರಿ ಕೈಗೊಳ್ಳಲು ರೂ.95.00 ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:05-01-2013 ರ ಟಿಪ್ಪಣಿ.

<u>ನಿರ್ಣಯ:-</u> **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:05-01-2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

8. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/37/12-13, ದಿನಾಂಕ:08-01-2013</u>

ಬೆಂಗಳೂರು ಮಹಾನಗರ ಜಿಲ್ಲೆಯ ಮಹದೇವಪುರ ವಲಯದ ಕೂಡ್ಲು ಚಿಕ್ಕಕೆರೆಯ ಒಟ್ಟು ವಿಸ್ತೀರ್ಣ 13 ಎಕರೆ 15 ಗುಂಟೆಗಳಾಗಿದ್ದು, ಕೂಡ್ಲು ಚಿಕ್ಕಕೆರೆಯಲ್ಲಿ ಮಳೆ ನೀರು ಸಂಗ್ರಹಣೆ ಮಾಡುವ ಸಲುವಾಗಿ, ಸದರಿ ಕೆರೆಯನ್ನು ಸಮಗ್ರ ಅಭಿವೃದ್ಧಿಪಡಿಸುವ ಸಲುವಾಗಿ, ಮೊದಲನೇ ಹಂತದಲ್ಲಿ ಸದರಿ ಕೆರೆಯಲ್ಲಿ ಅನಧಿಕೃತ ಒತ್ತುವರಿಯನ್ನು ತಡೆಯಲು ಕೂಡ್ಲು ಚಿಕ್ಕ ಕೆರೆಯ ಗಡಿಗೆ ತಂತಿ ಬೇಲಿ ಅಳವಡಿಸಲಾಗಿರುತ್ತದೆ.

ಕೂಡ್ಲು ಚಿಕ್ಕ ಕೆರೆಯಲ್ಲಿ ಮಳೆನೀರನ್ನು ಬರುವ ಮಳೆಗಾಲದಲ್ಲಿ ಸಂಗ್ರಹಿಸಲು ಕೆರೆಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯಲ್ಲಿ ಕೆರೆಯ ಒಳಹರಿವು ಹೆಚ್ಚಿಸಲು ಒಳಹರಿವು ಕಾಲುವೆ ದುರಸ್ಥಿ, ಹೂಳು ತೆಗೆಯುವುದು, ಏರಿ ದುರಸ್ಥಿ, ಕೊಳಚೆನೀರು ತಿರುವುಗಾಲುವೆ ಮುಂತಾದ ಅಂಶಗಳನ್ನು ಅಳವಡಿಸಿಕೊಂಡು ಕೆರೆಯ ಅಭಿವೃದ್ಧಿಯ ಅಂದಾಜುಪಟ್ಟಿಯನ್ನು ರೂ.195.00 ಲಕ್ಷಗಳಿಗೆ ತಯಾರಿಸಲಾಗಿದೆ.

ಮೇಲಿನ ಕಾಮಗಾರಿಯ ಟೆಂಡರ್‌ನಲ್ಲಿ ಗುತ್ತಿಗೆದಾರರಾದ **ಶ್ರೀ.ಬಿ.ಅರುಣ್ ಕುಮಾರ್**ರವರು ರೂ.2,10,18,040.93 (ಎರಡು ಕೋಟಿ ಹತ್ತು ಲಕ್ಷದ ಹದಿನೆಂಟು ಸಾವಿರದ ನಲವತ್ತು ರೂಪಾಯಿ ಮತ್ತು ತೊಂಭತ್ತಮೂರು ಪೈಸೆಗಳು ಮಾತ್ರ) ಗಳನ್ನು ನಮೂದಿಸಿದ್ದು, ಸದರಿ ಮೊತ್ತವು 2012-13ನೇ ಸಾಲಿನ ಅನುಮೋದಿತ ದರಪಟ್ಟಿಗಿಂತ ಶೇಕಡ +7.80% ಕಡಿಮೆ ಮೊತ್ತವಾಗಿರುವುದರಿಂದ, ಸದರಿ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 04-01-2013 ರ ಟಿಪ್ಪಣಿ.

<u>ನಿರ್ಣಯ:-</u> **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:04-01-2013 ರ ಟಿಪ್ಪಣಿಯನ್ನು ಸಮಿತಿ ಒಪ್ಪಿದೆ.**

ಮುಂದುವರೆದಿದೆ. . . .

9. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/38/12-13, ದಿನಾಂಕ:08-01-2013</u>

ಬೆಂಗಳೂರು ಮಹಾನಗರ ಜಿಲ್ಲೆಯ ಮಹದೇವಪುರ ವಲಯದ ದೇವಸಂದ್ರ ಕೆರೆಯ ಒಟ್ಟು ವಿಸ್ತೀರ್ಣ 16 ಎಕರೆ 8 ಗುಂಟೆಗಳಾಗಿದ್ದು, ದೇವಸಂದ್ರ ಕೆರೆಯಲ್ಲಿ ಮಳೆ ನೀರು ಸಂಗ್ರಹಣೆ ಮಾಡುವ ಸಲುವಾಗಿ, ಸದರಿ ಕೆರೆಯನ್ನು ಸಮಗ್ರ ಅಭಿವೃದ್ಧಿಪಡಿಸುವ ಸಲುವಾಗಿ, ಮೊದಲನೇ ಹಂತದಲ್ಲಿ ಸದರಿ ಕೆರೆಯಲ್ಲಿ ಅನಧಿಕೃತ ಒತ್ತುವರಿಯನ್ನು ತಡೆಯಲು ದೇವಸಂದ್ರ ಕೆರೆಯ ಗಡಿಗೆ ತಂತಿ ಬೇಲಿ ಅಳವಡಿಸಲಾಗಿರುತ್ತದೆ.

ದೇವಸಂದ್ರ ಕೆರೆಯಲ್ಲಿ ಮಳೆನೀರನ್ನು ಬರುವ ಮಳೆಗಾಲದಲ್ಲಿ ಸಂಗ್ರಹಿಸಲು ಕೆರೆಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯಲ್ಲಿ ಕೆರೆಯ ಒಳಹರಿವು ಹೆಚ್ಚಿಸಲು ಒಳಹರಿವು ಕಾಲುವೆ ದುರಸ್ಥಿ, ಹೂಳು ತೆಗೆಯುವುದು, ಏರಿ ದುರಸ್ಥಿ, ಕೊಳಚೆನೀರು ತಿರುವುಗಾಲುವೆ ಮುಂತಾದ ಅಂಶಗಳನ್ನು ಅಳವಡಿಸಿಕೊಂಡು ಕೆರೆಯ ಅಭಿವೃದ್ಧಿಯ ಅಂದಾಜುಪಟ್ಟಿಯನ್ನು **ರೂ.234.25 ಲಕ್ಷಗಳಿಗೆ** ತಯಾರಿಸಲಾಗಿದೆ.

ಮೇಲಿನ ಕಾಮಗಾರಿಯ ಟೆಂಡರ್‌ನಲ್ಲಿ ಗುತ್ತಿಗೆದಾರರಾದ **ಶ್ರೀ.ಸಿ.ಜಿ.ಚಂದ್ರಪ್ಪ**ರವರು ರೂ.2,45,96,302.09 (ಎರಡು ಕೋಟಿಯ ನಲವತ್ತೈದು ಲಕ್ಷದ ತೊಂಭತ್ತಾರು ಸಾವಿರದ ಮುನ್ನೂರ ಎರಡು ರೂಪಾಯಿ ಮತ್ತು ಒಂಭತ್ತು ಪೈಸೆಗಳು ಮಾತ್ರ) ಗಳನ್ನು ನಮೂದಿಸಿದ್ದು, ಸದರಿ ಮೊತ್ತವು 2012-13ನೇ ಸಾಲಿನ ಅನುಮೋದಿತ ದರಪಟ್ಟಿಗಿಂತ ಶೇಕಡ +7.98% ಹೆಚ್ಚಿನ ಮೊತ್ತವಾಗಿರುವುದರಿಂದ, ಸದರಿ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 04-01-2013 ರ ಟಿಪ್ಪಣಿ.

<u>ನಿರ್ಣಯ:-</u> **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:04-01-2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

10. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/39/12-13, ದಿನಾಂಕ:08-01-2013</u>

ಮೇಲ್ಕಾಣಿಸಿದ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು-5, ಕೆರೆಗಳು ರವರು ಮೊದಲನೇ ಕರೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ ಏಕೈಕ ಟಂಡರ್ ಸ್ವೀಕೃತವಾಗಿದ್ದು, ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು-5, ಕೆರೆಗಳು ರವರು ಏಕ ಟಎಂಡರ್‌ದಾರರಾದ **ಶ್ರೀ.ಜೆ.ಸಿ.ಪ್ರಕಾಶ್, ಗುತ್ತಿಗೆದಾರರ** ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ರೂ.300.00 ಲಕ್ಷಗಳ ಅಂದಾಜು ಪಟ್ಟಿಗೆ 2011-12ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು, ಕೆರೆಗಳು ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.2,99,99,648.18 ಗಳಾಗಿದ್ದು,

ಮುಂದುವರೆದಿದೆ. . . . .

ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ **ಶ್ರೀ.ಜೆ.ಸಿ.ಪ್ರಕಾಶ್**ರವರು, ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತವಾದ ರೂ.2,93,40,076.00 ಅನುಮೋದಿತ 2011-12ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ **ಶೇಕಡಾ 2.20% ರಷ್ಟು ಕಡಿಮೆ** ಮತ್ತು 2012-13ನೇ ಸಾಲಿನ ಪ್ರಸ್ತುತ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ 4.31% ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು, ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು(ಟೆಂಡರ್ ಪ್ರೀಮಿಯಂ ಸೇರಿ) ರೂ.2,93,40,076.00ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ./335/ ಎಮ್ಎನ್‌ವೈ/2007(ಭಾ) ದಿನಾಂಕ:11-05-2009 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/636/ಎಂಎನ್‌ವೈ/2010, ಬೆಂಗಳೂರು, ದಿನಾಂಕ:02-04-2011ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ **ಶ್ರೀ.ಜೆ.ಪಿ.ಪ್ರಕಾಶ್** ರವರು 2011-12ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇಕಡ 2.2%ರಷ್ಟು ಕಡಿಮೆ ದರಗಳು ಹಾಗೂ 2012-13ನೇ ಸಾಲಿನ ಪ್ರಸ್ತುತ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ **4.31% ರಷ್ಟು ಕಡಿಮೆ ದರಗಳು** ಅಥವಾ ರೂ.**2,93,40,076.00** (ಎರಡು ಕೋಟಿ, ತೊಂಭತ್ತಮೂರು ಲಕ್ಷದ, ನಲವತ್ತು ಸಾವಿರದ, ಎಪ್ಪತ್ತಾರು ರೂಪಾಯಿಗಳು ಮಾತ್ರ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:06-01-2013 ರ ಟಿಪ್ಪಣಿ.

**<u>ನಿರ್ಣಯ:-</u>** **ಮುಂದೂಡಲಾಗಿದೆ.**

ಮುಂದುವರೆದಿದೆ. . . . .

## 11. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/40/12–13, ದಿನಾಂಕ:09–01–2013</u>

ತೋಟಗಾರಿಕೆ ಇಲಾಖೆ ಪೂರ್ವ ವಿಭಾಗದ ವ್ಯಾಪ್ತಿಗೆ ಒಳಪಡತಕ್ಕ (1) ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತದಿಂದ ವಿಧಾನಸೌಧದವರೆಗಿನ ಮೀಡಿಯನ್, (2) ಕಬ್ಬನ್ ರಸ್ತೆಯ ಮಿನ್ಸ್‌ಕ್ ಸ್ಕ್ವಯರ್ ವೃತ್ತದಿಂದ ಮಣಿಪಾಲ್ ಸೆಂಟರ್‌ವರೆಗಿನ ಮೀಡಿಯನ್, (3) ಕಾಮರಾಜ ರಸ್ತೆಯ ಮಹಾತ್ಮ ಗಾಂಧಿ ರಸ್ತೆಯಿಂದ ಕಬ್ಬನ್ ರಸ್ತೆ ಮೀಡಿಯನ್ (4) ಅನಿಲ್ ಕುಂಬ್ಳೆ ವೃತ್ತದಿಂದ ಕಬ್ಬನ್ ರಸ್ತೆಯವರೆಗಿನ ಮೀಡಿಯನ್, (5) ಟ್ರಿನಿಟಿ ವೃತ್ತದ ಟ್ರಾಫಿಕ್ ಐಲ್ಯಾಂಡ್‌ಗಳನ್ನು ದತ್ತಿನ ಆಧಾರದ ಮೇಲೆ ನಿರ್ವಹಣೆ ಮಾಡಲು M/S Puravankara Project Limited. ಬೆಂಗಳೂರುರವರಿಗೆ ಹನ್ನೊಂದು ತಿಂಗಳ ಅವಧಿಗೆ ಅನುಮತಿ ನೀಡಲಾಗಿದ್ದು, ನಿರ್ವಹಣಾ ಅವಧಿಯು ದಿನಾಂಕ:16–09–2012 ಕ್ಕೆ ಮುಕ್ತಾಯಗೊಂಡಿದೆ. ಸದರಿ ಸಂಸ್ಥೆಯವರು ನಿರ್ವಹಣಾ ಅವಧಿಯನ್ನು ಮೂರು ವರ್ಷಗಳ ಅವಧಿಗೆ ನವೀಕರಿಸಲು ಕೋರಿ ದಿನಾಂಕ:28–11–2012 ರಂದು ಮನವಿ ಸಲ್ಲಿಸಿರುತ್ತಾರೆ. ಈ ಸಂಸ್ಥೆಯವರು ಸದರಿ ಮೀಡಿಯನ್ ಮತ್ತು ಸರ್ಕಲ್‌ಗಳನ್ನು ಮೇಲ್ಕಂಡ ಅವಧಿಯಲ್ಲಿ ನಿಯಮ ನಿಬಂಧನೆಗಳ ರೀತ್ಯಾ, ತೃಪ್ತಿಕರವಾಗಿ ನಿರ್ವಹಣೆ ಮಾಡಿರುತ್ತಾರೆ.

ಆದುದರಿಂದ ಪಾಲಿಕೆ ನಿಯಮ ನಿಬಂಧನೆಗಳ ರೀತ್ಯಾ, ನಿರ್ವಹಣಾ ದತ್ತಿನ ಅವಧಿಯನ್ನು ಮೂರು ವರ್ಷಗಳಿಗೆ ನವೀಕರಿಸಲು ಅನುಮತಿ ನೀಡುವ ಬಗ್ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ ದಿನಾಂಕ:27–12–2012 ರ ಟಿಪ್ಪಣಿ.

**<u>ನಿರ್ಣಯ:–</u> ಮಾನ್ಯ ಆಯುಕ್ತರವರ ದಿನಾಂಕ:27–12–2012 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 12. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/41/12–13, ದಿನಾಂಕ:09–01–2013</u>

ಬೆಂಗಳೂರು ಮಹಾನಗರ ಜಿಲ್ಲೆಯ ಮಹದೇವಪುರ ವಲಯದ ದೊಡ್ಡಕನ್ನೇಲಿ ಕೆರೆಯ ಒಟ್ಟು ವಿಸ್ತೀರ್ಣವು 18 ಎಕರೆ 14 ಗುಂಟೆಗಳಾಗಿದ್ದು, ಸದರಿ ಸಮಗ್ರ ಅಭಿವೃದ್ಧಿಪಡಿಸುವ ಸಲುವಾಗಿ, ಮೊದಲನೇ ಹಂತದಲ್ಲಿ ಸದರಿ ಕೆರೆಯಲ್ಲಿ ಅನಧಿಕೃತ ಒತ್ತುವರಿಯನ್ನು ತಡೆಯಲು ದೊಡ್ಡಕನ್ನೇಲಿ ಕೆರೆಯ ಗಡಿಗೆ ತಂತಿ ಬೇಲಿ ಅಳವಡಿಸಲಾಗಿರುತ್ತದೆ.

ದೊಡ್ಡಕನ್ನೇಲಿ ಕೆರೆಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯಲ್ಲಿ ಕೆರೆಯ ಒಳಹರಿವು ಹೆಚ್ಚಿಸಲು ಒಳಹರಿವು ಕಾಲುವೆ ದುರಸ್ಥಿ, ಹೂಳು ತೆಗೆಯುವುದು, ಏರಿ ದುರಸ್ಥಿ, ಕೊಳಚೆನೀರು ತಿರುವುಗಾಲುವೆ ಮುಂತಾದ ಅಂಶಗಳನ್ನು ಅಳವಡಿಸಿಕೊಂಡು ಕೆರೆಯ ಅಭಿವೃದ್ಧಿಯ ಅಂದಾಜುಪಟ್ಟಿಯನ್ನು ರೂ.375.00 ಲಕ್ಷಗಳಿಗೆ ತಯಾರಿಸಲಾಗಿದೆ.

ಮೇಲಿನ ಕಾಮಗಾರಿಯ ಟೆಂಡರ್‌ನಲ್ಲಿ ಗುತ್ತಿಗೆದಾರರಾದ **ಶ್ರೀ.ಕೆ.ದಾಮೋದರ್**ರವರು ರೂ..3,93,29,104.87 (ಮೂರು ಕೋಟಿಯ ತೊಂಭತ್ತ್ಮೂರು ಲಕ್ಷದ ಇಪ್ಪತ್ತೊಂಭತ್ತು ಸಾವಿರದ ಒಂದು ನೂರ ನಾಲ್ಕು ರೂಪಾಯಿ ಮತ್ತು ಎಂಭತ್ತೇಳು ಪೈಸೆಗಳು ಮಾತ್ರ)ಗಳನ್ನು

ಮುಂದುವರೆದಿದೆ. . . . .

ನಮೂದಿಸಿದ್ದು, ಸದರಿ ಮೊತ್ತವು 2012–13ನೇ ಸಾಲಿನ ಅನುಮೋದಿತ ದರಪಟ್ಟಿಗಿಂತ ಶೇಕಡ +7.50% ಹೆಚ್ಚಿನ ಮೊತ್ತವಾಗಿರುವುದರಿಂದ, ಸದರಿ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 04–01–2013 ರ ಟಿಪ್ಪಣಿ.

**<u>ನಿರ್ಣಯ:–</u>** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:04–01–2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಮುಂದಿನ ಸಭೆಗೆ ಪಾಲಿಕೆಯ ಎಲ್ಲಾ ವಲಯಕ್ಕೆ ಸಂಬಂಧಿಸಿದಂತೆ *ಕಾರ್ಯಕ್ರಮ ಪಟ್ಟಿ(POW)ಯನ್ನು ತಯಾರಿಸಿ ಸಮಿತಿಯ ಅನುಮೋದನೆ ಪಡೆಯುವಂತೆ ಸೂಚಿಸಿದರು.*

ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಂದುವರೆದಿದೆ. . . . .